ಡ್ರಾಮಾವನ್ನು ನಾವು ಸಿನಿಮಾಗಳಲ್ಲಿ ಕಲ್ಪನೆ ಮಾಡಲೂ ಆಗುವುದಿಲ್ಲ. ನಾವು ಪ್ರತೀದಿನ ಬೇರೆಯವರ ಕಡೆಗೆ ಬೆರಳು ತೋರಿಸಿ ನಿನ್ನಿಂದ ಹಾಗಾಯ್ತು, ಹೀಗಾಯ್ತು ಅಂತೀವಿ. ಈಕೆಗೆ ಬೆರಳೇ ಇಲ್ಲ–, ಟಿ.ವಿ ಷೋಗೆ ಬಂದು 12 ಲಕ್ಷ ರೂಪಾಯಿ ಗೆದ್ದುಕೊಂಡು ಹೋದಳು! ಈ ತರಹ ಟಿವಿಯಲ್ಲಿ ನೈಜ ಪಾತ್ರಗಳು ಮೇಕಪ್ ಇಲ್ದೆ ಬರ್ತಿರಬೇಕಾದರೆ, ಇದಕ್ಕಿಂತ ಹೆಚ್ಚು ಡ್ರಾಮಾ ಸಿನಿಮಾದಲ್ಲಿ ಹೇಗೆ ತೋರಿಸ್ತೀರಿ ಅನ್ನೋದು ಈಗಿರುವ ಪ್ರಶ್ನೆ. ಅದೂ ಟಿ.ವಿಯಲ್ಲಿ ಅವರ ಡೈಲಾಗ್‌ಗಳು ಒರಿಜಿನಲ್ ಡೈಲಾಗ್‌ಗಳು–, ಯಾರೂ ಹೇಳಿಕೊಟ್ಟದ್ದಲ್ಲ. ಅದರಲ್ಲಿ ಇರುವ ನಾಟಕೀಯತೆ.. ಅದೇ ಇವತ್ತು ಸಿನಿಮಾಗಳಿಗೆ ಚಾಲೆಂಜ್ ಆಗ್ತಿದೆ.

★ ನಮ್ಮ ಸಿನಿಮಾಗಳು ಈಗ ಏನು ಮಾಡಬೇಕು?

ಸಿನಿಮಾದಲ್ಲಿ ಈಗ ಎರಡು ಸಾಧ್ಯತೆಗಳಿವೆ. ಈ ರಿಯಾಲಿಟಿ ಷೋ ನ ಥ್ರಿಲ್‌ಅನ್ನು ನಾವು ಎದುರಿಸಬೇಕಾದರೆ, ಈಗ ಸ್ಪೈಡರ್ ಮ್ಯಾನ್ ಇದೆಯಲ್ಲ.. ಆ ರೀತಿಯ ಥ್ರಿಲ್ಲರ್‌ಗಳನ್ನು ಕೊಡಬೇಕು. ದೊಡ್ಡ ಮಟ್ಟದ ಗ್ಲೋರಿಫೈಡ್ ಸಿನಿಮಾಗಳನ್ನು ಮಾಡಬೇಕು. ದೊಡ್ಡ ಮಟ್ಟದ ಡಿಟಿಎಸ್, ಸೌಂಡ್ ಎಫೆಕ್ಟ್ ಇವುಗಳನ್ನು ಮುಟ್ಟೋಕೇ ಆಗಲ್ಲ. ಅಥವಾ ಹೈಡ್ರಾಮಾ ಇರುವ ಅತ್ಯಂತ ಇಮೋಷನಲ್ ಕಥೆಯನ್ನು ಕಟ್ಟಿಕೊಡಬೇಕು— ಅದೂ ಹಳೇ ಮಾದರಿಯಲ್ಲಿ ಅಲ್ಲ; ಹೊಚ್ಚ ಹೊಸ ರೀತಿಯಲ್ಲಿ ಕಥೆ ಹೇಳಬೇಕು. ಇದು ನನ್ನ ಕಥೆ ಅಂತ ಪ್ರೇಕ್ಷಕನಿಗೆ ಅನ್ನಿಸಬೇಕು. ಇದನ್ನು ಬಿಟ್ಟು ನಾವು ಮಾಮೂಲಿ ಸ್ಟೈಲ್‌ನಲ್ಲಿ ಸಿನಿಮಾ ಕಥೆ ಹೇಳ್ತಾ ಹೋದರೆ, ಪ್ರೇಕ್ಷಕನಿಗೆ ರಿಯಾಲಿಟಿ ಷೋನೇ ವಾಸಿ ಅಂತ ಅನ್ನಿಸಿಬಿಡುತ್ತೆ.

★ ಕನ್ನಡದಲ್ಲಿ ಗ್ರ್ಯಾಂಡ್ ಎನ್ನುವಂತಹ ಸಿನಿಮಾ ಮಾಡುವ ಸಂಸ್ಕೃತಿ ಇದೆಯಾ? ಒಂದೆರಡು ಪ್ರಯತ್ನಗಳು ಒಮ್ಮೊಮ್ಮೆ ನಡೀಬಹುದು...?

– ಎಲ್ಲವೂ ಗ್ರ್ಯಾಂಡ್ ಇರಬೇಕೆಂದಿಲ್ಲ. ತೀರಾ ಹೊಸ ರೀತಿಯಲ್ಲಿ ಕಥೆ ಹೇಳಿ, ರಿಯಾಲಿಟಿ ಷೋನಲ್ಲಿ ಬರುವಷ್ಟೇ ನೈಜವಾಗಿ, ಅಪೀಲ್ ಆಗುವಂತಹ ಕಥೆಗಳನ್ನು ಕೊಡಿ. ತಿಥಿ, ಯೂ ಟರ್ನ್, ಗೋಧಿ ಮೈಬಣ್ಣ... ಮುಂತಾಗಿ ಸಿನಿಮಾಗಳು ಬಂತಲ್ಲ– — ಹಾಗೆ ಹೊಸತನ್ನು ಮನಸ್ಸಿಗೆ ತಟ್ಟುವಂತೆ ಕೊಡಿ. ಎಷ್ಟು ಲೈಫ್‌ಗೆ ಹತ್ತಿರವಾಗುತ್ತೋ ಅಷ್ಟು ಪರಿಣಾಮಕಾರಿಯಾದ ಕ್ಯಾರೆಕ್ಟರ್ ಕ್ರಿಯೇಟ್ ಮಾಡಿ. ನಮಗೆ ಫ್ಯಾಮಿಲಿ ಜೊತೆಗೆ ಹೊರಗೆ ಹೋಗೋದೆಂದರೆ ಒಂದು ಥಿಯೇಟರ್, ಇನ್ನೊಂದು ರೆಸ್ಟೋರೆಂಟ್ ಅಷ್ಟೇ ಇರೋದು. ಅದು ಬಿಟ್ಟರೆ ಮಾಲ್‌ಗೆ ಹೋಗ್ತೀವಿ. ಥಿಯೇಟರ್‌ಗಳಂತೂ ನಮಗೆ ಬೇಕೇ ಬೇಕು–. ಹೋದಾಗ ಒಂದು ಅಪೀಲಿಂಗ್ ಆಗುವಂತಹ ಸಿನಿಮಾ ಕೊಟ್ಟುಬಿಟ್ಟರೆ ಜನ ಸಿನಿಮಾಗಳನ್ನು ಎತ್ತಿ ಹಿಡೀತಾರೆ. ಸದಾ ಮನೇಲಿ ಕೂತ್ಕೊಂಡು ರಿಯಾಲಿಟಿ ಷೋಗಳನ್ನೇ ನೋಡ್ಕೊಂಡು ಇರಲು ಆಗಲ್ಲ; ಔಟಿಂಗ್ ಬೇಕೇ ಬೇಕು ಸಾರ್.

★ ನೀವು ಪರಿವರ್ತನೆಯ ಕಾಲ ಅಂದಿರಿ, ಇದು ಎಷ್ಟು ಸಮಯ ನಡೆಯಬಹುದು?

ನಮ್ಮಲ್ಲಿ ಅಕಾಡೆಮಿಕ್ ಚರ್ಚೆ ನಡೀತದೆ, ಆದರೆ ಅದನ್ನು ಸಿನಿಮಾ ಮಾಡಿ ತೋರಿಸಬೇಕು ಸಾರ್. ಇದನ್ನು ಯಾರೂ ಯಾರಿಗೂ ಹೇಳಿಕೊಟ್ಟು ಮಾಡೋಕೆ ಆಗಲ್ಲ. ಅದು ನಿರ್ದೇಶಕನ ಸಾಮರ್ಥ್ಯ. ಕಿವಿ ಹಿಂಡಿ ಮಾಡೋ ಕೆಲಸ ಅಲ್ಲ. ಈಗ ಸಿನಿಮಾ ನಿಜಕ್ಕೂ ಡೈರೆಕ್ಟರ್ ಮೀಡಿಯಾ ಆಗಿದೆ. – ಈ ಟ್ರಾನ್ಸಿಸನ್ ಜಗತ್ತಿನ ಎಲ್ಲ ದೇಶಗಳಲ್ಲೂ, ಭಾಷೆಗಳಲ್ಲೂ ನಡೀತಿದೆ. ಅದು ಟೈಮ್ ಲಿಮಿಟ್ ಇಟ್ಟುಕೊಳ್ಳುವಂತಹದ್ದಲ್ಲ. ಸಿನಿಮಾದವರೂ ಬದಲಾಗಬೇಕು.



**ಕನ್ನಡದ ಕೋಟ್ಯಧಿಪತಿ ಷೋನಲ್ಲಿ ಬೆರಳುಗಳೇ ಇಲ್ಲದ ಒಬ್ಬಾಕೆ ಹೇಗೆ Fastest Finger First ರೌಂಡ್‌ನಲ್ಲಿ ಗೆದ್ದು 12 ಲಕ್ಷ ರೂಪಾಯಿ ಪಡೆಯುತ್ತಾಳೆಂದರೆ ಇದಕ್ಕಿಂತ ದೊಡ್ಡ ಡ್ರಾಮಾ ಸಿನಿಮಾದಲ್ಲಿ ಏನಿದೆ ಹೇಳಿ?**

★ ರಿಯಾಲಿಟಿ ಷೋ ಗಳಿಂದ ಜನರು ಬಿಡಿಸಿಕೊಂಡು ಹೊರಬಂದು ಮತ್ತೆ ಸಿನಿಮಾನೇ ಮುಖ್ಯ ಮನರಂಜನೆ ಆಗುವ ಸಾಧ್ಯತೆ ಇದೆಯೆ?

ಆರೂವರೆ ಕೋಟಿ ಜನ ಒಗ್ಗಿರೋದು ಅಷ್ಟು ಸುಲಭವಾಗಿ ಬದಲಾಗುತ್ತಾ.. ಆಗಲ್ಲ. ಇದಕ್ಕಿಂತ ದೊಡ್ಡ ಮಟ್ಟದಲ್ಲಿ ಇಂಟರ್‌ನೆಟ್ ದಾಳಿ ಇಟ್ಟಿದೆ! ನೋಡ್ತಾ ಇರಿ, ದೊಡ್ಡ ಸವಾಲು ಇನ್ನು ಮುಂದೆ ಇಂಟರ್‌ನೆಟ್ ಮತ್ತು ಇಂಟರ್‌ನೆಟ್ ಟಿವಿಗಳದ್ದು. ಹಳೇ ವಿದ್ಯೆ ಗೊತ್ತಿದ್ದೂ ಹೊಸದಕ್ಕೆ ಯಾರು ಅಡಾಪ್ಟ್ ಆಗ್ತಾರೋ ಅವರೇ ಸೂಪರ್‌ಸ್ಟಾರ್ ಆಗ್ತಾರೆ. ಈಗ ಇಂಟರ್‌ನೆಟ್ ಟಿವಿ ಬರ್ತದೆ ಅಂತಿಟ್ಕೊಳ್ಳಿ. ಅವನೂ ನನ್ನ ಹತ್ರಾನೇ ಬರ್ತಾನೆ. ಹಳೇ ಸಿನಿಮಾ ಮುಖಗಳು ಹೊಸ ತಂತ್ರಜ್ಞಾನಕ್ಕೆ ಅಡಾಪ್ಟ್ ಆಗಿ ಬಿಟ್ಟರೆ ನಡೀತದೆ. ಅಮಿತಾಭ್ ಅವರು ಅದನ್ನೇ ಮಾಡಿದ್ರು. ಆ ಕಾಲದಲ್ಲ ಅವರು ಟಿವಿಗೆ ಬರ್ತಾರೆ ಅಂದರೆ ನಮಗೆಲ್ಲ ದೊಡ್ಡ ಷಾಕ್. ಅವ್ರು ಬಂದು ಇಡೀ ಚಾನೆಲ್‌ನ ಟಿಆರ್‌ಪೀನೇ ಬದಲಾಯಿಸಿ ಬಿಟ್ರು. ಆವಾಗ ನಾವೆಲ್ಲ, ಅಮಿತಾಭೇ ಬಂದಿದ್ದಾರೆ ಇನ್ನು ನಾವೇನು ಕಾಯೋದು ಅಂತ ಸುಗ್ಗಿದೆವು.

★ ಈ ಟಿವಿ ಪಾತ್ರ ನಿಮ್ಮ ಸಿನಿಮಾಗಳಿಗೆ ಸಹಾಯ ಆಗುತ್ತಾ?

– ಸಿಕ್ಕಾಪಟ್ಟೆ ಸಹಾಯ ಆಗುತ್ತೆ. ನನ್ನ ಕೇಸೇ ತಗೊಳ್ಳಿ, ಅಮೃತವರ್ಷಿಣಿ, ಅಮೆರಿಕಾ ಅಮೆರಿಕಾ ಸಿನಿಮಾಗಳನ್ನು ಮಾಡಿದ್ದಾಗ ಇದ್ದ ಸ್ಟಾರ್‌ಗಿರಿ ಈಗ ಟಿ.ವಿ ಮೂಲಕ ನನಗೆ ಮತ್ತೆ ಬಂದಿದೆ. 'ವೀಕೆಂಡ್ ವಿಥ್ ರಮೇಶ್' ದೊಡ್ಡ ಮಟ್ಟದಲ್ಲಿ ಜನರನ್ನು ತಲುಪಿತು, ಈ ಕನ್ನಡದ ಕೋಟ್ಯಧಿಪತಿಯೂ ಹಾಗೆಯೇ. ಆದರೆ ಸಿನಿಮಾದಲ್ಲಿ ಜನ ದುಡ್ಡು ಕೊಟ್ಟು ಬಂದು ಕುಳಿತುಕೊಳ್ಳುತ್ತಾರೆ. ಅವರ ದುಡ್ಡಿಗೆ ನಾವು ವ್ಯಾಲ್ಯೂ ಕೊಟ್ಟರೆ ಮಾತ್ರ ಜನ ಬರ್ತಾರೆ.

★ ಎಲ್ಲ ರಿಯಾಲಿಟಿ ಷೋಗಳೂ ಭಾಷೆ, ಸಂಸ್ಕೃತಿ ಬೆಳವಣಿಗೆಗೆ ಪೂರಕವಾಗಿ ಇಲ್ಲವಲ್ಲ..?

ಎಲ್ಲವೂ ಷೋ ಹೋಸ್ಟ್ ಮತ್ತು ನಿರ್ದೇಶಕನ ಅಭಿರುಚಿ ಮೇಲೆ ಹೋಗುತ್ತೆ ಸಾರ್. ರಿಯಾಲಿಟಿ ಷೋ, ಸಿನಿಮಾಗಿಂತ ದುಬಾರಿ ಕೂಡಾ. ಅಷ್ಟೇ ಆದಾಯವಿದೆ. ಉದ್ಯೋಗಿಗಳ ಸಂಖ್ಯೆಯೂ ಹೆಚ್ಚೇ ಇದೆ. ಎಡಿಟಿಂಗ್‌ನಲ್ಲಿ ತುಂಬ ಮಂದಿ ಹಳೇ ಹುಲಿಗಳಿದ್ದರು. ನೆಗೆಟಿವ್‌ಗಳನ್ನು ಕಟ್ ಮಾಡಿ ಮಾಡಿ ಒಗೆಯೋರು. ಯಾವಾಗ ಟೆಕ್ನಾಲಜಿ ಬದಲಾಗಿ ಕಂಪ್ಯೂಟರ್ ಎಡಿಟಿಂಗ್ ಬಂತೋ ನಮ್ಮಲ್ಲಿ ಕೆಲವರು ಹೊಸ ಟೆಕ್ನಾಲಜಿಗೆ ಒಗ್ಗಲಿಲ್ಲ. ಅದೆಲ್ಲ ನಾನು ಮಾಡಲ್ಲ ಅಂದ್ರು. ಅವರೆಲ್ಲ ಹೊರಟೇ ಹೋದ್ರಲ್ಲ ಸಾರ್! ಹೊಸ ಟೆಕ್ನಾಲಜಿ ಬಂದಾಗ ನಾವು ಅದರೊಳಕ್ಕೆ ಹೋಗಲೇಬೇಕು. ಯಾರು ಎಷ್ಟು ಬೇಗ ಅಡಾಪ್ಟ್ ಆಗ್ತಾರೋ ಅವರು ಉಳೀತಾರೆ.

★ ಕಿರುತೆರೆ ಮತ್ತು ಸಿನಿಮಾ– ಎರಡರಲ್ಲಿ ಏನು ವ್ಯತ್ಯಾಸ ಕಂಡುಕೊಂಡಿದ್ದೀರಿ?

ವೀಕೆಂಡ್ ವಿಥ್ ರಮೇಶ್ ತರಹದ ನನ್ನ ಹಿಂದಿನ ಟಿವಿ ಷೋನಲ್ಲಿ, ಸೆಲೆಬ್ರಿಟಿಗಳಲ್ಲಿ ಇರುವ ಶ್ರೀಸಾಮಾನ್ಯತನವನ್ನು ಹೊರಗೆ ತೆಗೀತಾ ಇದ್ದೆ–. ಆದರೆ ಕನ್ನಡದ ಕೋಟ್ಯಧಿಪತಿಯಲ್ಲಿ ಶ್ರೀಸಾಮಾನ್ಯನಲ್ಲಿ ಇರುವ ಸೆಲೆಬ್ರಿಟಿಗಳನ್ನು ಹೊರಗೆ ತೆಗೀತಿದ್ದೇನೆ. ಹಿಂದಿನ ಷೋ ವೀಕೆಂಡ್ ಮಾತ್ರ ಇತ್ತು–; ಇದು ವಾರದಲ್ಲಿ ಐದು ದಿನ ಬರುತ್ತೆ. ನನ್ನ ಕಣ್ಣೆದುರಲ್ಲೇ ಎಷ್ಟೊಂದು ಜನರ ಜೀವನಾನೇ ಬದಲಾಗಿ ಹೋಯ್ತು ಸಾರ್!

★ ನಿಮ್ಮ ನಿರ್ದೇಶನದ ಸಿನಿಮಾ ಎಲ್ಲಿಗೆ ಬಂತು?

ನಿಮ್ಮ ಜತೆ ವಾಟ್ಸಾಪ್‌ನಲ್ಲಿ ಮಾತಾಡ್ತಾ ಈಗ ಗ್ರೀಸ್‌ನಲ್ಲಿದ್ದೀನಿ. 'ಬಟರ್‌ಫ್ಲೈ' ಚಿತ್ರದ ಶೂಟಿಂಗ್ ಇಲ್ಲಿ ಇನ್ನೂ ಎರಡು ದಿನ ಇದೆ. ತಮಿಳಿನಲ್ಲಿ ಇದೇ ಸಿನಿಮಾ — ಪ್ಯಾರಿಸ್ ಪ್ಯಾರಿಸ್. ಬಹುಶಃ ಅಕ್ಟೋಬರ್‌ನಲ್ಲಿ ರಿಲೀಸ್. ರಾಧಿಕಾ ಕುಮಾರಸ್ವಾಮಿ ನಿರ್ಮಾಣದ ಒಂದು ಚಿತ್ರ; ಇನ್ನೊಂದು ಪತ್ತೇದಾರಿ ಕಥೆಯ ಚಿತ್ರ ಒಪ್ಪಿಕೊಂಡಿದ್ದೇನೆ. ಸಿನಿಮಾದಲ್ಲಿ ಚಿತ್ರಕಥೆಗೆ ಸೀಮಿತ; ಆದರೆ ಟಿವಿ ಷೋ ನಲ್ಲಿ ನೀವು ಜೀವನದಲ್ಲಿ ಇದುವರೆಗೆ ಓದಿದ್ದು, ಕಲಿತದ್ದೆಲ್ಲ ಬಳಕೆ ಆಗ್ತಿದೆ! ■